xc-347
T-P-2

51st Year of Publication ★ SATYAVADI Daily, MYSORE 4

Reg No B G 155 3-8-1965

ಪ್ರಮುಖ ನವರ್ತಮಾನಗಳಿಗೆ -
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಪೆಚ್ಚು ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

Space available

For Permanent Advertisement

ಸ್ಥಾಪಕರು : ಅರಮನೆ ಶರತ್ಕೀರ್ತಿ ಎಂ. ವಿ. ಪುಟ್ಟಬುರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಳ್ಳಿ ನಿಯಂತ್ರಣ ಬರುವುದೇ?

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಯೋಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಪುನ್ಹಾರಾಜರು, ಮತ್ತಿತರೂಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸಪಯ್ಯನವರು, ಆಪೆರಾ ಟಾಕೇಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ಸಂಜುಂಡಸ್ವಾಮಿ (ಗ್ಲಾಸ್ಗೊ) ಶಾಪ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವುನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿರದ ನೀಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ನೀವು ನಾಳ್ಕು ಅಂಗಡಿ ಸುತ್ತುವುದೂ ಒಂದೇ ನೆಟ್ಟಗೆ ಬ್ಯಾಂಕ್ ರೋಡ್ ಬಾಹುಸಾರ್ ಕಂಪನಿಯಲ್ಲಿ ವ್ಯಾಪಾರ ಮಾಡುವುದೂ ಒಂದೇ ಅವರಲ್ಲಿ ಸಾಫ್-ಸೀದಾ ಒಂದೇ ವ್ಯವಹಾರ. ಒಂದೇ ಬೆಲೆ ಮತ್ತು ನ್ಯಾಯವಾದ ಬೆಲೆ. ಚೌಕಸಿ ಇಲ್ಲ. ಹೆಚ್ಚು ಹೇಳುವುದೂ ಇಲ್ಲ ಕಡಿಮೆ ಕೊಡುವುದೂ ಇಲ್ಲ. ಒಟ್ಟಿನ ಮೇಲೆ ತಲೆನೋವು ಇಲ್ಲದ ವ್ಯಾಪಾರ. ಆಷ್ಟೆ.

ಲಾಲ್‌ರವರ ಮಾಯಾಜಾಲ

ಬೆಂಗಳೂರು— ವಿಶ್ವವಿಖ್ಯಾತ ಮ್ಯಾಜಿಷಿಯನ್ ಶ್ರೀ ಲಾಲ್‌ರವರ ಅತ್ಯದ್ಭುತ ಮಾಯಾಜಾಲ ಪ್ರದರ್ಶನವು ಗುರುವಾರ ಪ್ರಾರಂಭವಾಯಿತು – ಎಂ ಪಿ ಸಿ ಅಧ್ಯಕ್ಷ ಡಾ || ಸಾಗಪ್ಪ ಆಳ್ವರು ಇದ್ದರು – ಒಬ್ಬ ಹುಡುಗಿಯನ್ನು ವಿದ್ಯುತ್ ಗರಗಸದಿಂದ ಎರಡು ತುಂಡು ಮಾಡುವುದು, ಬರಿಕೈಲಿ ಬೇಕಾದ ಪದಾರ್ಥ ಬರಿಸುವದು ಇತ್ಯಾದಿ ಅನೇಕ ಆಶ್ಚರ್ಯಗಳನ್ನು ಪ್ರದರ್ಶಿಸಿ ಪ್ರೇಕ್ಷಕರನ್ನು ಬೆರಗುಗೊಳಿಸಿದರು.

★

ಮುಷ್ಕರ

ಗೌಹತಿ — ಗೌಹತಿ ವಿಶ್ವವಿದ್ಯಾನಿಲಯದ 3500 ಸ್ನಾತಕೋತ್ತರ ವಿದ್ಯಾರ್ಥಿಗಳು ವ್ಯಾಸಂಗ ವೇತನವನ್ನು ಏರಿಸಿರುವ ಕುರಿತು ಅನಿರ್ದಿಷ್ಟ ಕಾಲ ಮುಷ್ಕರ ಹೂಡಿರುವರು.

★

ಹಾಟ್ ಸಾಹಿತ್ಯ

ನವ ದೆಹಲಿ — ಚೀನಾ ಅಧ್ಯಕ್ಷ ಮಾವೋರ ಸಾಹಿತ್ಯ ದೆಹಲಿಯಲ್ಲಿ ಬೇಕಾದಷ್ಟು ದೊರೆಯುತ್ತಿರುವುದೆಂಬುದನ್ನು ಕೈಹ ವಿಚಾರದ ಸಹಾಯ ಮಂತ್ರಿಗಳು ಒಪ್ಪಿಕೊಂಡರು. ಜಿಲ್ಲೆಟ್—ಸಿಂಕಿಂಗ್ ರಸ್ತೆ ವಿಚಾರದಲ್ಲಿ ಷೇಕ್ ಅಬ್ದುಲ್ಲರ ಹೇಳಿಕೆ ಆಕ್ಷೇಪಾರ್ಹವಾದುದೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ದಸ್ತಗಿರಿ

ಜೆಂಗಳೂರು — ಕೆಲಸ ಕೊಡಿಸುತ್ತೇನೆಂಬ ಆಸೆ ತೋರಿಸಿ 3 ಜನರಿಂದ ಹಣ ಸುಂತ ನಗರದ ಪ್ರಕಾಶರಾವ್ ತಲಾ ರೂ. 500 ವಸೂಲ್ಮಾಡಿಕೊಂಡ ಮೋಸದ ಆಸಾದನೆಯ ಮೇಲೆ ಬಂಧಿಸಲಾಯಿತು.

ಕೇಂದ್ರದಿಂದ ಪರಿಹಾರ

ಬೆಂಗಳೂರು— ಕೇಂದ್ರವು ರಾಜ್ಯದ ಅನಾವೃಷ್ಟಿ ಪ್ರದೇಶದ ಪರಿಹಾರ ಕಾರ್ಯಕ್ಕಾಗಿ ಏಪ್ರಾಗ್ದಾನ ಮಾಡಿದ ರೂ. 1.65 ಕೋಟಿಯನ್ನು ಕೂಡಲೇ ಕೊಡುವಂತೆ ಮನವಿ ಮಾಡಲಾಗಿದೆ. ಪರಿಹಾರ ಕಾರ್ಯವನ್ನು ನಡೆಸಲಾಗುತ್ತಿದೆ ಎಂದು ಕಂದಾಯ ಮಂತ್ರಿ ಶ್ರೀ ಕೌಜುಲಗಿ ಹೇಳಿದರು.

★

ವ್ಯವಸ್ಥೆ ಇಲ್ಲ

ನವ ದೆಹಲಿ — ರಾಜಧನ ಹುತ್ತಿಕರ ರಾಜಿಗೆ ಕೊಡುವ ರಿಯಾಯಿತಿಗಳನ್ನು ವಜಾ ಮಾಡುವ ಬಸ್ಯೆ ಸರ್ಕಾರ ನಿರ್ಧರಿಸಿರುವುದೆಂದೂ, ಆದರೆ ವಿವರ ಇನ್ನೂ ವ್ಯವಸ್ಥೆ ಆಗಿಲ್ಲವೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

★

ರೈಲ್ವೆ ನಿರ್ಮಾಣ

ಮಂಗಳೂರು — ಹಾಸನ-ಮಂಗಳೂರು ರೈಲ್ವೆ ಲೈನನ್ನು 1971 ರೊಳಗೆ ಮುಗಿಸಲು ರೈಲ್ವೆಯವರು ಕ್ರಮ ಪಡುತ್ತಿರುವರೆಂದು ಕೇಂದ್ರ ರೈಲ್ವೆ ಮಂತ್ರಿ ಶ್ರೀ ಪೂಣಚ ತಿಳಿಸಿದ್ದಾರೆ.

●

ವಿಷಮಿಶ್ರಿತ ಆಹಾರ

ಮಾಂಗೀರ್ — ಸುಲೂಕ್ ಜಾನದಲ್ಲಿ ಒಬ್ಬ ಮುಸ್ಲಿಂ ವಾಣಿಜ್ಯೋದ್ಯಮಿ ಮನೆಯಲ್ಲಿ ನಡೆದ ಭೋಜನ ಸಂದರ್ಭದಲ್ಲಿ ವಿಷಮಿಶ್ರಿತ ಆಹಾರದಿಂದ 52 ಮಂದಿ ಸತ್ತರು. ಮತ್ತೆ 70 ಅತಿಥಿಗಳು ಆಸ್ಪತ್ರೆಯಲ್ಲಿ ಒದ್ದಾಡುತ್ತಿದ್ದಾರೆ. ತಲೆ ಸುತ್ತಿ ತೆಂದು ಹೇಳಿ ಅಡಿಗೆಯವನು ಪರಾರಿ ಆದನು. ಈ ಸಮಯದಲ್ಲಿ ಹೂವರ ಬಂಧನವಾಗಿದೆ,

★

ಬೆಳ್ಳಿ ಮೇಲೆ ಹತೋಟಿಯೇ

ಬೊಂಬಾಯಿ— ದೇಶದಿಂದ ಬೆಳ್ಳಿ ಅಕ್ರಮ ಸಾಗಾಣಿಕೆ ತಪ್ಪಿಸಲು ಬೆಳ್ಳಿ ಹತೋಟಿ ಆಜ್ಞೆ ಜಾರಿಗೆ ಬರುವಂತಿದೆ – ಈ ವರ್ಷದ ಪ್ರಥಮ ಆರು ತಿಂಗಳಲ್ಲಿ ದೇಶದಿಂದ ರೂ. 50 ಕೋಟಿ ಬೆಲೆಯ ಬೆಳ್ಳಿ ಅಕ್ರಮ ಸಾಗಾಣಿಕೆಯಾಗಿದೆಯೆಂದು ಹೇಳಲಾಗಿದೆ.

★

ವಿದ್ಯಾರ್ಥಿಗಳ ಆಗಮನ

ಬೆಂಗಳೂರು —ಪಾಕೀಸ್ತಾನಕ್ಕೆ ಕಚ್ ವರ್ಗಾವಣೆ ಬಗ್ಯೆ ವಿರುದ್ಧ ಅಭಿಪ್ರಾಯ ಬಲಪಡಿಸಲು ಕಚ್‌ನಿಂದ ನಾಲ್ಕು ವಿದ್ಯಾರ್ಥಿಗಳು ಬಂದಿರುವರು. ಮೈಸೂರು ಶಿವನೊಗ್ಗಾಕ್ಕೆ ತೆರಳುವರು.

★

ಗಡಿ ಬಂಧ್

ನವ ದೆಹಲಿ — ಚೀನಾಕ್ಕೆ ಹೋಗಿರುವ ನಾಗಾಗಳು ನಾಗಾಲ್ಯಾಂಡಿಗೆ ವಾಪಸ್ ಆಗುವುದನ್ನು ಪ್ರತಿಬಂಧಿಸಲು ಭಾರತ ಸರ್ಕಾರ ಭಾರತ-ಬರ್ಮಾ ಗಡಿಯನ್ನು ಮುಚ್ಚಿತು.

★

ನಿರ್ಧಾರ ಕೈಗೊಂಡಿಲ್ಲ

ನವ ದೆಹಲಿ — ಮೈಸೂರು-ಮಹಾರಾಷ್ಟ್ರ ಗಡಿ ಬಗ್ಯೆ ಮಹಾಜನ್ ಆಯೋಗ ವರದಿ ಬಗ್ಯೆ ಸರ್ಕಾರ ಇನ್ನೂ ಯಾವ ನಿರ್ಧಾರವನ್ನೂ ಕೈಗೊಂಡಿಲ್ಲವೆಂದೂ ಲೋಕಸಭೆಯಲ್ಲಿ ತಿಳಿಸಲಾಯಿತು.

★

ಪ್ರತಿಬಂಧಕ

ಖಟ್ಮಂಡು — ತನ್ನ ದೇಶದಲ್ಲಿ ಚೀನ ಪ್ರಭಾವ ಹೆಚ್ಚುವುದನ್ನು ಪ್ರತಿಬಂಧಿಸಲು ನೇಪಾಳ ಸರ್ಕಾರ ನಿರ್ಧರಿಸಿದೆ.

★

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಆನಂತನರಸಿಂಹಯ್ಯಂಗಾರ್

★

(ಮುಂದುವರಿದುದು)

ಚರಿತ್ರೆಯನ್ನು ನೋಡಿದರೆ,, ಪ್ರಾಚೀನ ಕಾಲದಲ್ಲಿ ಹಿಂದೂ ಸಮಾಜದ ಎಲ್ಲಾ ಜನರೂ ಈಗಿನವರಿಗಿಂತ ಹೆಚ್ಚು ಜ್ಞಾನಿಗಳಾಗಿದ್ದರೆಂಬ ಸಂಗತಿಯು ತಿಳಿದುಬರುತ್ತದೆ. ಅನೇಕ ವಿದ್ವಾಂಸರೂ, ಕವಿಗಳೂ, ತಾರ್ಕಿಕರೂ, ಕಲಾಕಾರರೂ, ಸಾಧುಗಳೂ, ಭಕ್ತರೂ ಎಲ್ಲಾ ವರ್ಣದಲ್ಲಿಯೂ ಜನಿಸಿದ್ದಾರೆ. ರಾಷ್ಟ್ರದ ಆಡಳಿತವ್ಯವಸ್ಥೆಯು ಕ್ಷತ್ರಿಯರ ಕೈಯಲ್ಲಿದ್ದರೆ, ಹಣ ವೈಶ್ಯರಲ್ಲಿತ್ತು. ಇಂತಹ ಪರಿಸ್ಥಿತಿಯಲ್ಲಿ ಅಲ್ಪಸಂಖ್ಯಾತರೂ, ಸಾಮಾನ್ಯವಾಗಿ ಬಡವರಾಗಿರುವ ಬ್ರಾಹ್ಮಣರು ತಮ್ಮ ಸ್ವಾರ್ಥಕ್ಕಾಗಿ ಶಾಸ್ತ್ರಗಳನ್ನು ರಚಿಸಿದ್ದರೆ, ಸಮಾಜದಲ್ಲಿನ ಇತರರಿಗೆಲ್ಲರೂ ಅಧಃಪತನಕ್ಕೆ ಬೇಕೆ ಪ್ರಾತ್ಸಾಹವನ್ನು ಒಪ್ಪಿಕೊಂಡುಬಿಡುತ್ತಿದ್ದರೇ ?

ನಮ್ಮ ಕಾಲದಲ್ಲಿ ವರ್ಣಾಶ್ರಮವ್ಯವಸ್ಥೆಯು ಹಿಂದಿನಷ್ಟು ಬಿಗಿಯಾಗಿಲ್ಲ. ರಾಜ್ಯಭಾರವನ್ನು ನಡೆಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆಲ್ಲಾ ಅಧಿಕಾರವಿದೆ ; ರಾಜದ್ರವ್ಯ ಬೊಕ್ಕಸವಿದೆ ; ಬಹುಸಂಖ್ಯಾಕರ ಬಲವಿದೆ. ಅವರು ರಾಜ್ಯಭಾರ ವಹಿಸಿದಾಗಿನಿಂದಲೂ ವರ್ಣಾಶ್ರಮಧರ್ಮವ್ಯವಸ್ಥೆ ಇಲ್ಲದಂತೆ ಮಾಡಲು ನಾನಾರೀತಿಯ ಯತ್ನಗಳನ್ನು ಇಪ್ಪತ್ತು ವರ್ಷಗಳಿಂದ ನಡೆಸಿದರೂ ವರ್ಣಾಶ್ರಮ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಪೆಚ್ಚನೆ ವೈತ್ಯಾಸ ಕಂಡುಬಂದಿಲ್ಲ. ದಿನೇದಿನೇ ಪರಿಸ್ಥಿತಿ ಕಠಿಣವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಈ ರೀತಿ ಇರುವಾಗ ಕೆಲವು ಸ್ವಾರ್ಥಿ ಬ್ರಾಹ್ಮಣರ ಮಾತನ್ನು ಎಲ್ಲರೂ ಕೇಳಿ, ತಾವು ಕೆಳಮಟ್ಟದವರಾದರೆಂಬು ಹೇಳಿದರೆ ನಂಬಲು ಸಾಧ್ಯವಿಲ್ಲ. ಈ ರೀತಿ ನಡೆಯಲು ಸಾಧ್ಯವೂ ಇರಲಿಲ್ಲ.

Quality Printi g — Neat Binding

Lakshminarasimha Press

Sivarampet, Mysore

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H. H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow), have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Heaity cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi,' Ghamarajapuram, Mysore 4.

ಆಶೋಕ ಬಿಸ್ಕೆಟ್ ಸೀಸ್

ಅಸ್ಸಾಂಡ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ರಯಾರ್ಡ್ ಬಿಸ್ಕೆಟ್‌ಗಳನ್ನು ನಮ್ಮಲ್ಲಿ ದೊರೆಯುತ್ತವೆ

ವುಡ್‌ಲಾಂಡ್ಸ್ ಆಗೋಷ 6 ನೇ ವಾರ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ದಿನ 3 ಪ್ರದರ್ಶನಗಳು]

ಅಪೇರ— ಜನವರಿಯು 5 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವಥ್ ದಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀಶ್ರೀಶ್ರೀ ಜಗದ್ಗುರು ಮಹಾಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನದ ಉದಾರ ಅನುಗ್ರಹ ಕೃಪೆಯಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ ಪ್ರಚಾರದಲ್ಲಿ, ಶಾಖಾಹಾರ, ಪಶುವೈದ್ಯ, ಎಜುಕೇಷನಲ್ ವಿಭಾಗ ಮುಂತಾದವುಗಳಲ್ಲಿ ; ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣೆ ವ್ಯವಸ್ಥಾಪಕರೆ ಏನಂತಿ —

ಗೋರಕ್ಷಣೆಗೆ ಬೇಕಾಗುವಷ್ಟು ಪ್ರೋತ್ಸಾಹಕ ಧನವನ್ನೂ ಹಾಲಪ್ರತಿಷ್ಠಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಲಿಯ ಕಳಿಸಿಕೊಡಲು ಇವರಲ್ಲಿ ಚಂದಾ ವಾಪತವಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿಎನ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ ಜಿ ಶಾಸ್ತ್ರಿಗಳು, 1030 ವಿಜಯೇಂದ್ರಪುರ, ಮೈಸೂರು

ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ ಹೊಂಗನೂರು

ಗೋರಕ್ಷಣಾ ಪತ್ರಿಕೆ ಸತ್ಯವಾದಿಸ್ಥಾನ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣಾ ಅಫೀಸು 1057 ಚಾಮರಾಜಪುರಂ, ಮೈಸೂರು

Cow Slaughter should be banned Immediately

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮುಖ್ಯಕಾರ್ಯವೆಂದರಿತು ಕಾರ್ಯಗಳು ಹೆಚ್ಚೆ ಜಾಗ್ರತಿ ನಡೆಯಲಿ

Edited, Printed & Published by Dharmaprachara Nisata M S Krishna Rao (Proprietor) at the Satyavadi Press Chamarajapuram, Mysore 4